SC. 8/2014

ಡಿಡಬ್ಲ್ಯೂ-2

**ದಿನಾಂಕ: 10.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ಆರೋಪಿ ಪರ ವಿಶೇಷ ಅಬಿಯೋಜಕರಿಂದ ಶ್ರೀ ಎಸ್ ಬಿ ವಕೀಲರಿಂದ:**

ನಮ್ಮ ಆಸ್ಪತ್ರೆ ಎಲ್ಲಾ ಕಾನೂನು ಮತ್ತು ರೀತಿ ಒಳಪಟ್ಟ ಆಸ್ಪತ್ರೆ ಎಂದರೆ ಸರಿ. ನಾವು ಒಳರೋಗಿಗಳ ಮತ್ತು ಹೊರರೋಗಿಗಳ ಮಾಹಿತಿಗಳನ್ನು ರಿಜಿಸ್ಟರ್ ಗಳನ್ನು ಇಟ್ಟಿರುತ್ತೇವೆ. ಪ್ರಸವ ಪೂರ್ವದ ಗರ್ಬಿಣಿಯರು ನಮ್ಮ ಆಸ್ಪತ್ರೆಗೆ ಪರೀಕ್ಷೆಗಾಗಿ ಮತ್ತು ಚಿಕಿತ್ಸೆಗೆ ಬಂದಾಗ ಅವರ ದಾಖಲೆಯನ್ನು ಮಾಡಿಕೊಂಡು ಅಗತ್ಯವಿದ್ದ ಚಿಕಿತ್ಸೆಗಳನ್ನು ಕೊಟ್ಟು ಕಳುಹಿಸುತ್ತೇವೆ. ಆಸಂಬಂಧ ಸಲಹಾ ಚೀಟಿಗಳನು ಸಹಾ ಕೊಟ್ಟಿರುತ್ತೇವೆ. ಚಿಕಿತ್ಸೆಗಾಗಿ ಅವರಿಂದ ಪಡೆದುಕೊಂಡ ಶುಲ್ಕಕ್ಕೆ ರಸೀದಿಯನ್ನು ಕೊಡುತ್ತೇವೆ. 7 ವರ್ಷದವರೆಗೆ ನಮ್ಮಲ್ಲಿ ದಾಖಲಾತಿಗಳನ್ನು ಸಂರಕ್ಷಿಸಿ ಇಟ್ಟಿರುತ್ತೇವೆ. ಯಾವುದೇ ರೋಗಿಯು ನಮ್ಮ ಆಸ್ಪತ್ರೆಗೆ ದಾಖಲಾದಾಗ ಅವರಿಗೆ ವಿಶಿಷ್ಟವಾದ ಕಾಯಿಲೆಗೆ ತಜ್ಞ ವೈದ್ಯರಿಗೆ ಶಿಫಾರಸ್ಸು ಬರವಣಿಗೆಯಲ್ಲಿ ಮಾಡಲಾಗುತ್ತದೆ. ತಜ್ಞ ವೈದರು ಬಂದು ರೋಗಿಗೆ ವಿಶೇಷ ಚಿಕಿತ್ಸೆ ಮಾಡಿದರೆ ಅವರಿಗೆ ನಮ್ಮ ಆಸ್ಪತ್ರೆಯಿಂದ ಚಿಕಿತ್ಸಾ ಶುಲ್ಕವನ್ನು ಕೊಡಲಾಗುತ್ತದೆ. ತಜ್ಞ ವೈದ್ಯರಿಗೆ ಮಾಸಿಕ ವಾಗಿ ಶುಲ್ಕವನ್ನು ಕೊಡುತ್ತೇವೆ. ಎಷ್ಟು ಜನಗಳಿಗೆ ಅವರು ಚಿಕಿತ್ಸೆ ಮಾಡುತ್ತಾರೋ ಅವರಿಗೆ ವಂತಿಗೆಯನ್ನು ಕೊಡುತ್ತೇವೆ. ಆ ರೀತಿ ಹಣ ವಿತರಣೆ ಮಾಡಿದ್ದಕ್ಕೆ ನಮ್ಮಲ್ಲಿ ಓಚರ್ ಗಳನ್ನು ಪಡೆದುಕೊಂಡು ಲೆಕ್ಕಾಚಾರ ಇಟ್ಟಿರುತ್ತೇವೆ. ಸದರಿ ಲೆಕ್ಕಾಚಾರವೂ ಕೂಡ 7 ವರ್ಷದವರೆಗೆ ಲಭ್ಯವಿರುತ್ತದೆ.

ಯಾವುದೇ ಒಳರೋಗಿಗೆ ಡಿಸಚಾರ್ಜ್ ಸಮರಿಯನ್ನು ಕೊಡಲಾಗುತ್ತದೆ ಎಂದರೆ ಸರಿ. ಡಿಸ್ ಚಾರ್ಜ್ ಸಮರಿಯಲ್ಲಿ ಕಾಯಿಲೆಗಳ ವಿವರಗಳು ಅವರಿಗೆ ಕೊಟ್ಟ ಚಿಕಿತ್ಸೆ ಮತ್ತು ಸಲಹೆಗಳನ್ನು ನಮೂದು ಮಾಡಲಾಗುತ್ತದೆ.

ಶಸ್ತ್ರಚಿಕಿತ್ಸೆಯ ಪ್ರಸೂತಿ ಮಾಡಬೇಕಾದರೆ ಎಲ್ಲಾ ಬಿಪಿ , ಶುಗರ್ ಇತರೆ ಸಂಬಂಧಿತ ದೇಹ ದೃಢತೆಯನ್ನು ಖಾತರಿ ಮಾಡಿಕೊಳ್ಳಲು ಆಯಾ ತಜ್ಞ ವೈದ್ಯರಿಂದ ಕ್ಲಿಯರನ್ಸ್ ಪಡೆದುಕೊಳ್ಳಬೇಕು ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಎಲ್ಲಾ ಪ್ರಕರಣಗಳಲ್ಲಿ ಅದರ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ.

ಪ್ರಶ್ನೆಃ ಹೃದಯ ಸಂಬಂಧಿ ಕಾಯಿಲೆ ಇರುವ ವ್ಯಕ್ತಿಗಳಿಗೆ ಶಸ್ತ್ರಚಿಕಿತ್ಸೆ ಮಾಡುವ ಮೊದಲು ತಜ್ಞ ವೈದ್ಯರಿಂದ ದೃಡತೆಯ ಸಲಹೆ ಪಡೆಯಬೇಕು ಅಲ್ಲವೇ?

ಉತ್ತರಃ ಸಂಬಂದಪಟ್ಟ ವೈದ್ಯರು ಅದರ ಅವಶ್ಯಕತೆ ಇದೆ ಎಂದು ಅಭಿಪ್ರಾಯ ಪಟ್ಟರೆ ಪಡೆದುಕೊಳ್ಳಬೇಕಾಗುತ್ತದೆ ಎಂದು ನುಡಿಯತ್ತಾರೆ.

ಎಲ್ಲಾ ಶಸ್ತ್ರ ಚಿಕಿತ್ಸೆಯನ್ನು ಕಡ್ಡಾಯವಾಗಿ ತಜ್ಞ ವೈದ್ಯರ ದೃಢೀಕರಣ ಮಾಡಿಕೊಳ್ಳಬೇಕು ಎನ್ನುವುದು ಸರಿಯಲ್ಲ.

ಡಾಃ ಅಂಬುಜಾ ಎನ್ನುವವರು ರೋಗಿಗಳ ಹೆಚ್ಚಿನ ಚಿಕಿತ್ಸೆಯ ಬಗ್ಗೆ ಅಭಿಪ್ರಾಯ ಕೊಡುತ್ತಾರೆ. ರೋಗಿಯು ದಾಖಲಾದ ನಂತರ ಮತ್ತು ಶಸ್ತ್ರಚಿಕಿತ್ಸೆಯ ಮಧ್ಯದಲ್ಲಿ ಸದರಿ ರೋಗಿಯು ಯಾವ ಔಷಧಿಯನ್ನು ಉಪಯೋಗಿಸಿದ್ದಾರೆಂದು ಅರವಳಿಕೆ ತಜ್ಞರು ತಿಳಿದುಕೊಳ್ಳುತ್ತಾರೆಂದರೆ ಸರಿ. ಶಸ್ತ್ರಚಿಕಿತ್ಸೆಯ ಮೊದಲು ರೋಗಿಗೆ ಯಾವುದೇ ಔಷಧಿ

ಕೊಟ್ಟಿದ್ದರೂ ಕೂಡ ದಾಖಲಿಸಲಾಗಿರುತ್ತದೆ. ನಿಡಿ–21ರಲ್ಲೂ ರೋಗಿ ದಾಖಲಾದ ದಿನಾಂಕ 22/06/2011 ಆಗಿರುತ್ತದೆ.

ಮನಸ್ಸಿಗೆ ಸಂಬಂದಪಟ್ಟ ಕಾಯಿಲೆಗಳು ಇದ್ದರೆ ಅದಕ್ಕೆ ಸೂಕ್ತ ,ಚಿಕಿತ್ಸೆ ಮಾಡುವ ಮುನ್ನ ಮತ್ತು ತಜ್ಞ ವೈದ್ಯರಿಗೆ ರೆಫರ್ ಮಾಡುವ ಮುನ್ನ ಆ ರೋಗಿಯ ಹಿನ್ನೆಲೆಯನ್ನು ನಮೂದು ಮಾಡಿಕೊಳ್ಳುತ್ತಾರೆಂದರೆ ಸರಿ. ವೈದ್ಯರು ಮನೋರೋಗಿಗೆ ಚಿಕಿತ್ಸೆ ಕೊಡುವುದಕ್ಕಿಂತಲೂ ಮೊದಲು ಪೂರ್ವದಲ್ಲಿ ಏನು ಔಷಧಿ ಪಡೆದುಕೊಳ್ಳುತ್ತಿದ್ದರು ಕೇಳಿ ಮಾಹಿತಿ ತೆಗೆದುಕೊಳ್ಳುತ್ತಾರೆಂದರೆ ಸರಿ. ವೀಣಾರವರು ಹೊರರೋಗಿಯಾಗಿ ಯಾವ್ಯಾವ ದಿನಾಂಕಗಳಂದು ಚಿಕಿತ್ಸೆ ಪಡೆದುಕೊಂಡಿದ್ದಾರೆಂದು ಗೊತ್ತಿಲ್ಲ, ಅಕೆ ದಾಖಲಾಗುವುದಕ್ಕಿಂತ ಮೊದಲು ಏನು ಚಿಕಿತ್ಸೆ ಮಾಡಿಕೊಂಡಿದ್ದಾರೆಂದು ಗೊತ್ತಿಲ್ಲ. ನಮ್ಮ ಆಸ್ಪತ್ರೆಯಲ್ಲಿ ದಾಖಲಾಗುವುದಕ್ಕಿಂತ ಮೊದಲು ಆಕೆ ಬೇರೆ ಯಾವ ತಜ್ಞರಿಂದ ಚಿಕಿತ್ಸೆ ಪಡೆದಿದ್ದಾರೆಂದು ಗೊತ್ತಿಲ್ಲ. ನಿ.ಡಿ 21ರ ದಿನಾಂಕ 06/01/2011ರ ರಸೀದಿಯಲ್ಲಿ ರೋಗಿಯನ್ನು ರೆಫರ್ ಮಾಡಿರುವ ವೈದ್ಯರು ರುಜು ಹಾಕಿರುವ ವಿವರಗಳು ಇಲ್ಲ ಎಂದರೆ ಸರಿ. ನಿಡಿ–21ರ 06/01/2011ರ ರಸೀದಿಯಲ್ಲಿ ದಿನಾಂಕ ಸ್ವಲ್ಪ ತಿದ್ದಿದಂತೆ ಕಾಣುತ್ತದೆ ಎಂದರೆ ಸರಿ. ದಿನಾಂಕವನ್ನು ಒತ್ತಿ ಬರೆಯಲಾಗಿದೆ ಅದನ್ನು ಯಾವುದೇ ಒತ್ತಿ ಬರೆದಿದ್ದಾರೆಂದು ಗೊತ್ತಿಲ್ಲ. ನಿಡಿ–21ರ ದಿನಾಂಕ 06/01/2011ರ ರಸೀದಿಯಲ್ಲಿ ಡಾಃ ಚಂದ್ರಶೇಖರ್ ರವರ ಬರವಣಿಗೆ ಇರುತ್ತದೆ. ನಿ.ಡಿ–21 ರ 06/01/2011ರ ರಸೀದಿ ಈಗ ನೋಡುತ್ತಿದ್ದು ಹೊರರೋಗಿ ವಿಭಾಗದಲ್ಲಿ ಬರೆದುಕೊಟ್ಟಿರುವ ರಸೀದಿ ಆಗಿರುತ್ತದೆ. ಡಾಃ ಚಂದ್ರಶೇಖರ್ ರವರು ನಿಡಿ–21 ರ 06/01/2011ರಂದು ಹೊರರೋಗಿಯಲ್ಲಿ ಬರೆದುಕೊಟ್ಟಿರುವ

ಚೀಟಿಗೆ ಆ ದಿವಸ ಕರ್ತವ್ಯ ನಿರ್ವಹಿಸಿದ್ದಾರೆಂದು ಅರ್ಥ ಇರುತ್ತದೆ. ಅವರಿಗೆ ಸೇವಾ ಶುಲ್ಕವನ್ನು ಕೊಟ್ಟಿರುವ ಬಗ್ಗೆ ನಮ್ಮಲ್ಲಿ ದಾಖಲೆ ಇಟ್ಟಿರುತ್ತೇವೆ. 2011 ನೇ ಇಸವಿಯ ವ್ಯವಹಾರದ ಲೆಕ್ಕಪತ್ರ ಗಳು 7 ವರ್ಷಗಳು ಆಗಿರುವುದರಿಂದ ನಮ್ಮ ಆಸ್ಪತ್ರೆಯಲ್ಲಿ ಹಾಳು ಮಾಡಿರಬಹುದು ಅಥವಾ ಇದ್ದರೆ ಹಾಜರುಪಡಿಸಲು ಆಗುತ್ತದೆ. 7 ವರ್ಷಗಳ ಅಂಕಿ-ಅಂಶಗಳನ್ನು ನಾವು ಇಟ್ಟಿರುತ್ತೇವೆ. ನಮ್ಮ ಆಸ್ಪತ್ರೆಯ ಕೇಸ್ ಫೈಲಿನಲ್ಲಿ ಇಟ್ಟುಕೊಂಡಿರುವ ದಿನಾಂಕ 06/01/2011ರ ರಸೀದಿಯ ಜೆರಾಕ್ಸ್ ಇರುತ್ತದೆ. ಕಡತದಲ್ಲಿರುವ ಸದರಿ ಜೆರಾಕ್ಸ್ ಪ್ರತಿಯನ್ನು ಅಥೆಂಟಿಕೇಶನ್ ಇಲ್ಲ ಎಂದರೆ ಸರಿ. ವೀಣಾರವರಿಗೆ ನಾನು ಚಿಕಿತ್ಸೆ ನೀಡಿರುವುದಿಲ್ಲ. ಆಕೆಗೆ ಶಸ್ತ್ರಚಿಕಿತ್ಸೆ ಅಗುವ ಮೊದಲು ಆಕೆಯನ್ನು ನಾನು ನೋಡಿಲ್ಲ. ನಾನು ಆಕೆಯನ್ನು ಯಾವುದೇ ತಜ್ಞ ವೈದ್ಯರಿಗೆ ರೆಫರ್ ಮಾಡಿರುವುದಿಲ್ಲ. ಡಾಃ ಚಂದ್ರಶೇಖರ್ ರವರಿಗೆ ವೀಣಾರವರನ್ನು ರೆಫರ್ ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು ಕನ್ಸಲ್ಟಂಟ್ ವೈದ್ಯರು ರೆಫರ್ ಮಾಡಿರುತ್ತಾರೆಂದು ನುಡಿಯುತ್ತಾರೆ. ನಿಡಿ-21ರ ದಾಖಲೆಯಲ್ಲಿ ವೀಣಾರವರು ಅವರು ಪೂರ್ವ ರೋಗಿ ಸ್ಥಿತಿಯ ಬಗ್ಗೆ ಕೊಟ್ಟಿರುವ ಮಾಹಿತಿಗಳ ಬಗ್ಗೆ ವೀಣಾ ರವರು ಹೇಳಿದಂತೆ ನಮೂದು ಇಲ್ಲ ಎಂದರೆ ಸರಿ. ರೋಗಿಯ ಜೊತೆ ಒಬ್ಬರು ಅವರ ಕಡೆಯವರು ಇದ್ದು ನಿಗಾ ವಹಿಸಲು ನಮ್ಮಲ್ಲಿ ಅವಕಾಶ ಇರುತ್ತದೆ. ವೀಣಾರ ರವರ ಜೊತೆ ಯಾರು ಅವರ ಸಹಾಯಕ್ಕಾಗಿ ಆಸ್ಪತ್ರೆಯಲ್ಲಿ ಅವರ ಜೊತೆಯಲ್ಲಿದ್ದರು ಎಂದು ಗೊತ್ತಿಲ್ಲ. ಅವರ ತಾಯಿ ಅವರ ಸಹಾಯಕ್ಕಾಗಿ ಆಸ್ಪತ್ರೆಯಲ್ಲಿದರು ಎನ್ನುವುದು ಗೊತ್ತಿಲ್ಲ. ವೀಣಾಳ ಗಂಡ ವೀಣಾಳ ಜೊತೆ ಬಂದು ಸಹಾಯಕ್ಕಾಗಿ ಇದ್ದರು ಎನ್ನುವುದಕ್ಕೆ ದಾಖಲೆ ಇರುವುದಿಲ್ಲ. ವೀಣಾಳು ದಾಖಲಾಗುವ ಪೂರ್ವ ಸ್ಥಿತಿ ಮತ್ತು ಪೂರ್ವ ಚಿಕಿತ್ಸೆಯ ಬಗ್ಗೆ ನಿಡಿ-21 ರಲ್ಲಿ ನಮೂದಿಲ್ಲ ಎಂದರೆ ಸರಿಯಲ್ಲ. ಅಡ್ಮಿಶನ್

ಮಾಡಿಕೊಳ್ಳುವ ಸಂದರ್ಭದಲ್ಲಿ ಅವರ ಪೂರ್ವ ಸ್ಥಿತಿಯನ್ನು ದಾಖಲು ಮಾಡಲಾಗಿದೆ. ಆಕೆಗೆ ಮಾನಸಿಕ ಖಿನ್ನತೆ ಇರುವುದನ್ನು ನಮೂದು ಮಾಡಲಾಗಿದೆ. ಆಕೆಯ ಖಿನ್ನತೆಗೆ ಪೂರ್ವದಲ್ಲಿ ಏನು ಚಿಕಿತ್ಸೆ ಪಡೆದುಕೊಂಡಿದ್ದಾರೆಂದು ನಮೂದಿಲ್ಲ. ನಿಡಿ–21ರಲ್ಲಿ she was conscious and oriented ಎಂದು ನಮೂದಿದೆ ಎಂದರೆ ಸರಿ. ನಿಡಿ–21 ರಲ್ಲಿ ದಿನಾಂಕ 22/06/2011ರಂದು ನಮೂದು ಮಾಡಿರುವ ಕೇಸ್ ಶೀಟ್ ನಲ್ಲಿ ಬರವಣಿಗೆ ಮಾಡುವಾಗ ನಾನು ಸದರಿ ವೈದ್ಯರ ಮುಂದೆ ಇರಲಿಲ್ಲ. ನಿಡಿ–21ರ ಲ್ಲಿ 22/06/2011ರ ಕೇಸ್ ಶೀಟ್ ನಲ್ಲಿ ಮೊದಲ ಮೂರು ವಾಕ್ಯಗಳು ಬೇರೆಯವರ ಹಸ್ತಾಕ್ಷರಲ್ಲಿದೆ ಮತ್ತು ನಂತರದ ವಾಕ್ಯಗಳು ಮತ್ತೊಬ್ಬರ ಹಸ್ತಾಕ್ಷರಲ್ಲಿದೆ ಎನ್ನುವುದು ಗೊತ್ತಿಲ್ಲ. ನಿಡಿ–21ರ 8ನೇ ಪುಟದಲ್ಲಿ ವೈದ್ಯರ ಸಹಿ ಇಲ್ಲ ಎಂದರೆ ಸರಿ. ನಿಡಿ–21 ರ 7 ನೇ ಪುಟದಲ್ಲಿ 2 ವ್ಯಕ್ತಿಗಳ ಹಸ್ತಾಕ್ಷರಗಳು ಇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಬೇರೆ ಬೇರೆ ವೈದ್ಯರು ಬರೆದಿರುವುದು ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಡಿ–21ರ 7 ನೇ ಪುಟದಲ್ಲಿ ವೈದ್ಯರ ಸೀಲು ಮತ್ತು ಸಹಿ ಇಲ್ಲ ಎಂದರೆ ಸರಿ. ನಿಡಿ–21ರ 7ನೇ ಪುಟದಲ್ಲಿ ಪ್ರಾರಂಭದಲ್ಲಿ 23/06/2011 ಎಂದು ನಂತರ ದಿನಾಂಕ 22/06/2011 ಎಂದು ನಮೂದು ಇದೆ ಎಂದರೆ ಸರಿ. ಆದರೆ ಬಗ್ಗೆ ನನಗೆ ವೈಯುಕ್ತಿಕ ಮಾಹಿತಿ ಇರುವುದಿಲ್ಲ. ವೀಣಾ ನಮ್ಮ ಆಸ್ಪತ್ರೆಯಲ್ಲಿ ದಾಖಲಾಗುವ ಮೊದಲ ಅವರಿಗೆ ಸಂಬಂಧಪಟ್ಟ ಮಾಹಿತಿಗಳು ನಮ್ಮಲ್ಲಿ ಇರುವುದಿಲ್ಲ. ನಿಡಿ–21ರ 17 ನೇ ಪುಟದಲ್ಲಿ ನರ್ಸ್ ಗಳು ದಾಖಲು ಮಾಡಿರುವ ಮಾಹಿತಿ ಇರುತ್ತದೆ. ನಿಡಿ–21ರಲ್ಲಿ ಡಿಸಚಾರ್ಜ್ ಸಮರಿ ಇಲ್ಲ ಎಂದರೆ ಸರಿ. ಡಿಸಚಾರ್ಜ್ ಸಮರಿಯನ್ನು ನಾನು ಈ ದಿವಸ ತಂದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಡಿಸಚಾರ್ಜ್ ಸಮರಿಯನ್ನು ಡಿಸಚಾರ್ಜ್ ಮಾಡುವಾಗ ರೋಗಿಗಳ ಕೈಗೆ

ಕೊಡುತ್ತೇವೆಂದು ನುಡಿಯುತ್ತಾರೆ. ಡಿಸಚಾರ್ಜ್ ಸಮರಿ 2011 ರಿಂದ 7 ವರ್ಷಗಳವರೆಗೆ ಅದರ ಮೂಲ ಪ್ರತಿಯನ್ನು ಆಸ್ಪತ್ರೆಯಲ್ಲಿಟ್ಟಿರುತ್ತೇವೆ. ನಿಡಿ–21 ನ್ನು ಕೊಡುವಾಗ ಡಿಸಚಾರ್ಜ್ ಸಮರಿ ಇತ್ತು. ನಿಡಿ–21ರ ಮಾಹಿತಿಯಂತೆ ಮಾತ್ರ ನಾನು ಸಾಕ್ಷಿ ಹೇಳಲು ಆಗುತ್ತದೆ ಅದಕ್ಕೆ ಹೊರತಾಗಿ ಮಾಹಿತಿಗಳನ್ನು ಹೇಳಲು ಬರುವುದಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದಾರೆ, ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/–

**(ಹೆಚ್.ದೇವರಾಜು)**

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.